**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಸಿ.ಸಿ. ನಂ :- | **80/2018** |
| ಪಿ.ಡಬ್ಲ್ಯೂ- | **01** |
| ದಿನಾಂಕ :- | **07.01.2023** |

**ಮುಂದುವರೆದ ಪಾಟೀ ಸವಾಲುಃ ಶ್ರೀ ಹೆಚ್.ಎಸ್.ಆರೋಪಿ ಪರ ವಕೀಲರಿಂದ**

ಆರೋಪಿಯು ನನ್ನ ಬಳಿ ಯಾವ ದಿನಾಂಕದಂದು ಸಾಲವನ್ನು ಕೋರಿರುತ್ತಾರೆ ಎಂದು ನನಗೆ ನೆನಪಿಲ್ಲ. ಜನವರಿ 2016 ನೇ ಸಾಲಿನಲ್ಲಿ ಹಣವನ್ನು ಕೋರಿರುತ್ತಾರೆ. ಅವರು ಹಣ ಕೋರಿದ 8 ರಿಂದ 10 ದಿನಗಳ ಬಳಿಕ ಅವರಿಗೆ ಸಾಲದ ಹಣವನ್ನು ನಮ್ಮ ಮನೆಯ ಬಳಿ ಇರುವ ನನ್ನ ಸ್ನೇಹಿತರ ಕಛೇರಿಯಲ್ಲಿ ನೀಡಿರುತ್ತೇನೆ. ಆ ಸಂದರ್ಭದಲ್ಲಿ ಯಾರೂ ಹಾಜರಿರಲಿಲ್ಲ. ಕಛೇರಿಯ ಮಾಲೀಕರೂ ಸಹ ಹಾಜರಿರಲಿಲ್ಲ.

ಗಿರೀಶ ರಾವ್ ಎಂಬುವವರು ನಮ್ಮ ನೆರೆಹೊರೆಯವರು. ಅವರು ನನ್ನೊಂದಿಗೆ ವಿಶ್ವಾಸದಲ್ಲಿದ್ದಾರೆ ಎಂದರೆ ಸಾಕ್ಷಿಯು ಅಷ್ಟಕ್ಕಷ್ಟೆ ಎಂದು ನುಡಿದಿರುತ್ತಾರೆ. ಆರೋಪಿಗೆ ನಾನು ಸಾಲದ ಹಣವನ್ನು ಹಿಂದಿರುಗಿಸುವಂತೆ ಯಾವ ದಿನಾಂಕದಂದು ಕೋರಿರುತ್ತೇನೆ ಎಂದು ನೆನಪಿಲ್ಲ. 2017 ನೇ ಏಪ್ರಿಲ್ ತಿಂಗಳಿನಲ್ಲಿ ಕೋರಿರುತ್ತೇನೆ. ಆರೋಪಿಯು ನಿಪಿ 3 ಕ್ಕೆ ನಿಪಿ 8 ರಂತೆ ಮರು ಉತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ಅದರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ನಿಪಿ 1 ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿರುತ್ತದೆ. ಸಾಕ್ಷಿಯು ಮುಂದುವರೆದು ಸರಿಯಾದ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ 3 ಕ್ಕೆ ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಿಪಿ 3 ರಲ್ಲಿ ನಿಪಿ 1 ರ ಚೆಕ್ ಯಾವ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ನಮೂದು ಆಗಿದೆ ಎಂದರೆ ನನಗೆ ನೆನಪಿಲ್ಲ. ನಿಪಿ1 ರ ಚೆಕ್ "Stop Payment" ಕಾರಣಕ್ಕಾಗಿ ಅಮಾನ್ಯ ಗೊಂಡಿದೆ ಎಂದರೆ ಸರಿ. ದಿನಾಂಕ 25.11.2016 ರಂದು ಆರೋಪಿಯು ತನ್ನ ಬ್ಯಾಂಕಿಗೆ ತನ್ನ ಬಾಬ್ತು ಎರಡು ಚೆಕ್ ಗಳು ಅಂದರೆ 269799 ಮತ್ತು 269800 ಗಳಿಗೆ "Stop Payment" ವಿನಂತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ ಗಳು ಕಳೆದು ಹೋಗಿದ್ದ ಕಾರಣ ಬ್ಯಾಂಕಿಗೆ ಆರೋಪಿಯು "Stop Payment" ವಿನಂತಿಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಂತೆಯೇ ದಿನಾಂಕ 25.11.2016 ರಂದು ಬೆಳಿಗ್ಗೆ 11.40 ರ ವೇಳೆಗೆ ಬ್ಯಾಂಕು ಮೇಲ್ಕಂಡ ಚೆಕ್ ಗಳಿಗೆ "Stop Payment" ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ

ಚೆಕ್ ಗಳ ಪೈಕಿ ನಿಪಿ 1 ರ ಚೆಕ್ ಸಹ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಗ ನಾನು ಒಂದು ಖಾಲಿ ಚೆಕ್ ನ ನೆರಳಚ್ಚು ಪ್ರತಿಯನ್ನು ನೋಡುತ್ತಿದ್ಧೇನೆ ಎಂದರೆ ಸರಿ. ಸದರಿ ಖಾಲಿ ಚೆಕ್ ನ ನೆರಳಚ್ಚು ಪ್ರತಿಯಲ್ಲಿ "269800" ಎಂದು ನಮೂದು ಆಗಿದೆ ಎಂದರೆ ಸರಿ. ಸದರಿ ಚೆಕ್ ಆರೋಪಿಯ ಖಾತೆಗೆ ಸಂಬಂಧಿಸಿದ್ದಾಗಿದೆ ಎಂದರೆ ಸರಿ. ಸಾಕ್ಷಿಯು ಕಾರ್ಪೋರೇಶನ್ ಬ್ಯಾಂಕನ "269800" ಸಹಿ ಮಾಡಿದ ಖಾಲಿ ಚೆಕ್ ನ ನೆರಳಚ್ಚು ಪ್ರತಿಯನ್ನು ಒಪ್ಪಿದ್ದರಿಂದ ಅದನ್ನು ನಿಡಿ 1 ಎಂದು ನಿಶಾನೀಕರಿಸಲಾಯಿತು. ಆರೋಪಿಯು ನನಗೆ ನಿಪಿ 1 ರ ಚೆಕ್ ಗೆ ಸಹಿ ಮಾಡಿ ನೀಡಿರುತ್ತಾರೆ. ಆರೋಪಿಯು ಅವರಿಗೆ ಬರವಣಿಗೆ ಮಾಡಲು ಬಾರದ ಕಾರಣ ಸದರಿ ಚೆಕ್ ನ್ನು ತುಂಬುವಂತೆ ನನಗೆ ಸೂಚಿಸಿರುತ್ತಾರೆ. ಈ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ, ಫಿರ್ಯಾದಿನಲ್ಲಾಗಲೀ ಅಥವಾ ತಿಳುವಳಿಕೆ ಪತ್ರದಲ್ಲಾಗಲೀ ನಮೂದು ಮಾಡಿರುವುದಿಲ್ಲ.

ಆರೋಪಿಯು 4 ಅಥವಾ 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರಬಹುದು. ಆರೋಪಿಯು ನಿಪಿ 1 ರ ಚೆಕ್ ಗೆ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ನಿಪಿ 1 ರಲ್ಲಿ ನಮೂದು ಆಗಿರುವ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಸರಿ.

ಆರೋಪಿಯ ಬಾಬ್ತು ಚೆಕ್ ಕಳೆದು ಹೋಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಚೆಕ್ ನನಗೆ ದೊರೆತು ಅದಕ್ಕೆ ನಾನು ಮನಸೋ ಇಚ್ಛೆ ಬರವಣಿಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದೊರೆತ ಆರೋಪಿಯ ಬಾಬ್ತು ಮತ್ತೊಂದು ಚೆಕ್ ನಂಬರ್ "269799" ನ್ನು ನಾನು ಗಿರೀಶ ರಾವ್ ಎಂಬುವವರ ಮುಖೇನ ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿಗೂ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಹಣದ ಮರುಪಾವತಿಗಾಗಿ ಆರೋಪಿಯು ನನಗೆ ನಿಪಿ 1 ರ ಚೆಕ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ನನಗೆ ದೊರೆತಿರುವ ಆರೋಪಿಯ ಬಾಬ್ತು ನಿಪಿ 1 ರ ಚೆಕ್ ನ್ನು ನಾನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಬಾಬ್ತು ಚೆಕ್ ನನಗೆ ದೊರೆತಿದ್ದು, ಅದನ್ನು ನಾನು ಅವರಿಗೆ ಹಿಂದಿರುಗಿಸದೇ ಬ್ಯಾಂಕಿಗೆ ಹಾಜರುಪಡಿಸಿ, ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಅವರ ಚೆಕ್ ನ್ನು

ದುರುಪಯೋಗಪಡಿಸಿಕೊಂಡು ಈ ದಿನ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.